**ದಿನಾಂಕಃ 24-09-2025 ರಂದು** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ಸರ್ವೆ ನಂ.35/2 ರ ವ್ಯವಹಾರದ ಮಾತು ಕತೆ ನಮ್ಮ ಊರಿನಲ್ಲಿ ಅಗಿರುತ್ತದೆ. ಕ್ರಯಪತ್ರ ಬರೆಸಿಕೊಳ್ಳುವ ಮೊದಲು ಜಮೀನನ್ನು ಅಳತೆ ಮಾಡಿಸಿರುವುದಿಲ್ಲ. ನಮಗೆ ಕ್ರಯ ಪತ್ರ ಬರೆದುಕೊಡುವ ಮೊದಲು 7 ಎಕರೆ 11 ಗುಂಟೆಯಲ್ಲಿ ಗಣೇಶ್ ರವರೇ ಸ್ವಾಧೀನದಲ್ಲಿದ್ದರು ಎಂದರೆ ಸರಿ. ಕ್ರಯಕ್ಕೆ ಪಡೆಯುವ ಸಮಯದಲ್ಲಿ 1 ಎಕರೆಯನ್ನು ಅಳತೆ ಮಾಡಿಸಿಕೊಡಿ ಎಂದು ವಾದಿ ಗೆ ಕೇಳಿರುತ್ತೇನೆ. ವಾದಿಯು 1 ಎಕರೆಯನ್ನು ಅಳತೆ ಮಾಡಿಸಿ , ಚೆಕ್ಕುಬಂದಿಯನ್ನು ಹಾಕಿಸಿಕೊಟ್ಟಿರುತ್ತಾರೆ. ಸರ್ವೆ ಇಲಾಖೆಯವರಿಂದ ಅಳತೆ ಮಾಡಿಸಿಕೊಟ್ಟಿರುತ್ತಾರೆ. ಸದರಿ ಅಳತೆ ಮಾಡಿಸಿದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ವಾದಿ ಸೇರಿ ಅವರು 5 ಜನ ಸಹೋದರರು ಇದ್ದಾರೆ ಎಂದರೆ , ಆ ಬಗ್ಗೆ ಗೊತ್ತಿಲ್ಲ.

2. ವಾದಿ ಮತ್ತು ನನ್ನ ಯಜಮಾನರದ್ದು ಒಂದೇ ಊರು ಎಂದರೆ ಸರಿ. ವಾದಿಯವರ ಕುಟುಂಬದಲ್ಲಿ ಎಷ್ಟು ಜನ ಇದ್ದಾರೆ ಎಂದು ನನ್ನ ಯಜಮಾನರಿಗೆ ಗೊತ್ತು ಎಂದರೆ ಸರಿ. ನಮಗೆ ಮಾರಾಟ ಮಾಡುವ ಮೊದಲು ವಾದಿ ಮತ್ತು ಅವರ ಸಹೋದರರು ಸದರಿ ಜಮೀನಿನಲ್ಲಿ ಸ್ವಾಧೀನದಲಿದ್ದರು ಎಂದರೆ ಸಾಕ್ಷಿಯು ನನಗೆ ಆ ಬಗ್ಗೆ ಗೊತ್ತಿಲ್ಲ , ನಮಗೆ 1 ಎಕರೆ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ವಾದಿ ನಮಗೆ ಸಬ್ ರಿಜಿಸ್ಟರ್ ಕಚೇರಿಯಲ್ಲಿ ಕ್ರಯಪತ್ರ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ, ಬೇರೆ ಯಾವುದೇ ವ್ಯಕ್ತಿಯನ್ನು ಕರೆದುಕೊಂಡು ಹೋಗಿ ಕ್ರಯಪತ್ರವನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

3. ನಿಡಿ-2 ರಲ್ಲಿರುವ ಸಹಿ ವಾದಿಯ ಸಹಿಯಲ್ಲ ಎಂದರೆ ಸರಿಯಲ್ಲ. ನಿಡಿ-2 ರಲ್ಲಿರುವ ಸಹಿಯನ್ನು ತಜ್ಞರಿಂದ ಪರಿಶೀಲನೆಗೆ ಒಳಪಡಿಸಲು ನನ್ನ ತಕರಾರು ಇಲ್ಲ. ನಿಡಿ-2 ರಲ್ಲಿ ಕಾಣಿಸಿರುವ ಜಮೀನಿನ ಪೂರ್ವಕ್ಕೆ ಃ ವಾದಿಯ ಜಮೀನು ಇರಬಹುದು , ಸ್ಪಷ್ಟವಾಗಿ ಗೊತ್ತಿಲ್ಲ , ಪಶ್ಚಿಮಕ್ಕೆ ಃ ಕರಿಯಪ್ಪನ ಜಮೀನು , ಉತ್ತರಕ್ಕೆ ಃ ಕೆಂಗಾಬೋವಿ , ದಕ್ಷಿಣಕ್ಕೆ

ಃವಾದಿಯ ಜಮೀನು ಇರುತ್ತದೆ. ನಾನು ಹೇಳಿದ ಚೆಕ್ಕು ಬಂದಿಗೂ ಸ್ವಳದಲ್ಲಿರುವ ಜಮೀನಿಗೂ ತಾಳೆ ಇಲ್ಲ ಎಂದರೆ ಸರಿಯಲ್ಲ. ವಾದಿಯವರು ಜಮೀನನ್ನು ನನ್ನ ಸ್ವಾಧೀನಕ್ಕೆ ಬಿಟ್ಟುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ರೆವಿನ್ಯೂ ಅಧಿಕಾರಿಗಳ ಜೊತೆ ಶಾಮೀಲಾಗಿ ಕ್ರಯಪತ್ರವನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಈಗಲೂ 7 ಎಕರೆ 11 ಗುಂಟೆ ಜಮೀನಿನಲ್ಲಿ ವಾದಿಯೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

4. ನಾನು ಹೇಳಿದ 1 ಎಕರೆ ಜಮೀನಿನ ಚೆಕ್ಕುಬಂದಿ ಈಗ ಪೂರ್ವಕ್ಕೆ ಃ ಹುಲಿಗಾಗೋವಿ , ಪಶ್ಚಿಮಕ್ಕೆ ಃ ಕರಿಯಪ್ಪ , ಉತ್ತರಕ್ಕೆ ಃ ಕೆಂಗಾಬೋವಿ ,ದಕ್ಷಿಣಕ್ಕೆ ಃ ವಾದಿಯವರ ಜಮೀನು ಇರಬಹುದು. ನಾವು ಜಮೀನಿನ ಸ್ವಾಧೀನದಲ್ಲಿ ಇಲ್ಲದೇ ಇದ್ದರೂ ಸಹ ವಾದಿಯವರ ಸ್ವಾಧಿನಕ್ಕೆ ತೊಂದರೆ ಉಂಟು ಮಾಡಿದ ಕಾರಣ ವಾದಿ ಈ ದಾವೆ ಹೂಡಿರುತ್ತಾರೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಶಿರಾ.